**SEPTEMBER 18, 2026**

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಬೆಂಗಳೂರು, ಹಿಂದೂಸ್ತಾನ್ ಏರೋನಾಟಿಕ್ಸ್** ಲಿಮಿಟೆಡ್ –HAL ಕೇಂದ್ರದಲ್ಲಿ, ರಕ್ಷಣಾ ಖಾತೆ ಸಚಿವ ರಾಜನಾಥ್ ಸಿಂಗ್ ಹಾಗೂ ನಾಗರಿಕ ವಿಮಾನಯಾನ ಖಾತೆ ಸಚಿವ ರಾಮಮೋಹನ್ ನಾಯ್ಡು ಅವರ ಸಮ್ಮುಖದಲ್ಲಿ, ಎಲ್.ಸಿ.ಎ –ಹಗುರ ಯುದ್ಧ ವಿಮಾನ ತೇಜಸ್, ಅವಳಿ ಆಸನ ವ್ಯವಸ್ಥೆಯ ತರಬೇತಿ ವಿಮಾನಗಳು ಹಾಗೂ HTT -40 ಮೂಲ ತರಬೇತಿ ವಿಮಾನಗಳು ಭಾರತೀಯ ವಾಯುಪಡೆಗೆ ಇಂದು ಸೇರ್ಪಡೆಗೊಳ್ಳಲಿವೆ.

<><><>

**ಮೇಕ್ ಇನ್ ಇಂಡಿಯಾ ಮೂಲಕ** ಪ್ರಸ್ತುತ, ದೇಶದ ಎಲೆಕ್ಟ್ರಾನಿಕ್ ಉತ್ಪನ್ನಗಳ ರಫ್ತು ಹೆಚ್ಚಳವಾಗಿದೆ. ಪ್ರಸಕ್ತ ವರ್ಷದ ಮಧ್ಯಭಾಗದಲ್ಲಿ ಭಾರತ, ವಿಶ್ವದ ಆರನೇ ಅತಿದೊಡ್ಡ ಎಲೆಕ್ಟ್ರಾನಿಕ್ ವಸ್ತುಗಳ ರಫ್ತುದಾರ ದೇಶವಾಗಿ ಹೊರಹೊಮ್ಮಿದೆ. ವಿದ್ಯುತ್ ಚಾಲಿತ ವಾಹನಗಳ ಘಟಕ ನಿರ್ಮಾಣ, ಪುನರ್ಬಳಕೆ ಇಂಧನ ಶಕ್ತಿ, ಡ್ರೋನ್ ಹಾಗೂ ವೈದ್ಯಕೀಯ ಉಪಕರಣಗಳ ನಿರ್ಮಾಣದಲ್ಲಿ ಮೇಕ ಇನ್ ಇಂಡಿಯಾ ಪ್ರಭಾವಿಸಿದೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ** ಜನ್ಮದಿನದ ಹಿನ್ನೆಲೆ, ಒಂದು ತಿಂಗಳ ಕಾಲ ಸೇವಾ ಸಂಕಲ್ಪ ಅಭಿಯಾನವನ್ನು ಬೂತ್ ಮಟ್ಟದಲ್ಲಿ ಆಯೋಜಿಸಲಾಗುತ್ತಿದೆ. ಅವರ ಜನಪರ ಆಡಳಿತ ಹಾಗೂ ಜನಪರ ಯೋಜನೆಗಳ ಕುರಿತು ಜನಸಾಮಾನ್ಯರಿಗೆ ಮಾಹಿತಿ ನೀಡುವುದರೊಂದಿಗೆ, ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಬೆಳಗಾವಿ ಸಂಸದ ಜಗದೀಶ ಶೆಟ್ಟರ ಹೇಳಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಜನ್ಮದಿನದ ಅಂಗವಾಗಿ, ಬೆಳಗಾವಿ ದಕ್ಷಿಣ ಕ್ಷೇತ್ರದ, ಕಲಾ ಮಂದಿರದಲ್ಲಿ ಆಯೋಜಿತ ದೀಪೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

<><><>

**ಜಗದೀಶ ಶೆಟ್ಟರ ಧ್ವನಿ– 41 ಸೆಕೆಂದುಗಳು**

<><><>

**ಕರಾವಳಿಯ ಸರ್ವತೋಮುಖ** ಬೆಳವಣಿಗೆ ಹಾಗೂ ಸ್ಥಳೀಯ ಜನರ ಆಶೋತ್ತರಗಳನ್ನು ಈಡೇರಿಸಲು, ಮಂಗಳೂರಿನಲ್ಲಿ ಸಚಿವ ಸಂಪುಟ ಸಭೆ ಆಯೋಜಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ತಿಳಿಸಿದ್ದಾರೆ. ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ರಾಜ್ಯ ಸಚಿವ ಸಂಪುಟ ಸಭೆ, ಮಂಗಳೂರು, ಉಡುಪಿ, ಉತ್ತರ ಕನ್ನಡ ಸೇರಿದಂತೆ ಕರಾವಳಿಯ ಅಭಿವೃದ್ಧಿಗೆ ಚೈತನ್ಯ ತುಂಬಿ, ಹೊಸ ಮುನ್ನುಡಿ ಬರೆಯಲಿದೆ ಎಂದಿದ್ದಾರೆ.

<><><>

**ಸಚಿವ ಸಂಪುಟ ಸಭೆ ಈ ಮಧ್ಯಾಹ್ನ 12 ಗಂಟೆ** 30 ನಿಮಿಷಕ್ಕೆ ಆರಂಭವಾಗಲಿದೆ. ಸಭೆಗೂ ಮುನ್ನ ಕದ್ರಿ ಶ್ರೀ ಮಂಜುನಾಥ ದೇವಸ್ಥಾನಕ್ಕೆ ತೆರಳಿದ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ದೇವರ ದರ್ಶನ ಪಡೆದರು.

<><><>

**ರಾಯಚೂರು ಜಿಲ್ಲೆಯ ಸಿರವಾರ, ಮಾನ್ವಿ,** ಸಿಂಧನೂರು ಸೇರಿದಂತೆ ವಿವಿಧ ತಾಲೂಕುಗಳ ಬರ ಸಮೀಕ್ಷೆ ವರದಿ ಸಿದ್ಧಪಡಿಸಲಾಗಿದೆ. ಇಂದು ಮಂಗಳೂರಿನಲ್ಲಿ ಆಯೋಜಿತ, ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ಚರ್ಚೆ ನಡೆಯಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಅಜಯ ಧರ್ಮ ಸಿಂಗ್ ತಿಳಿಸಿದ್ದಾರೆ.

<><><>

**ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ,** ರಾಜ್ಯ ಚುನಾವಣಾ ಆಯೋಗ ಕೈಗೊಂಡ, ಮತದಾರರ ಪಟ್ಟಿಯ, ವಿಶೇ ’ ಸಮಗ್ರ ಪರಿ ್ಕರಣೆ ಹಿನ್ನೆಲೆ, ನಾಳೆ ಹಾಗೂ ನಾಡಿದ್ದು, ಅರ್ಹ ಮತದಾರರ ನೋಂದಣಿ, ವಿಶೇಷ ಆಂದೋಲನ ರಾಜ್ಯಾದ್ಯಂತ ನಡೆಯಲಿದೆ. ಧಾರವಾಡ ಜಿಲ್ಲೆಯಲ್ಲಿ, ಮತದಾರರ ಪಟ್ಟಿಯ, ವಿಶೇ ’ ಪರಿ ್ಕರಣೆ ಹಿನ್ನೆಲೆ, ಜಿಲ್ಲೆಯ ಎಲ್ಲ ಮತಗಟ್ಟೆಗಳಲ್ಲಿ, ಬೂತ್ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದು, ನೋಂದಣಿ ಕಾರ್ಯ ಕೈಗೊಳ್ಳಲಿದ್ದಾರೆ ಎಂದು, ಜಿಲ್ಲಾ ಚುನಾವಣಾಧಿಕಾರಿ, ಆರ್.ಸ್ನೇಹಲ್ ತಿಳಿಸಿದ್ದಾರೆ.

<><><>

**ಉತ್ತರ ಕರ್ನಾಟಕದಲ್ಲಿ,** ಶೇಕಡ 60ರ ್ಟು ಖಾಸಗಿ ಅನುದಾನಿತ ಶಾಲಾ, ಕಾಲೇಜುಗಳಿದ್ದು, ಸಕಾಲಿಕ ಅನುದಾನ ಲಭ್ಯವಾಗದೇ, ಮುಚ್ಚುವ ಹಂತ ತಲುಪಿವೆ ಎಂದು, ವಿಧಾನ ಪರಿ ’ತ್ ಸದಸ್ಯ ಬಸವರಾಜ ಹೊರಟ್ಟಿ, ಹೇಳಿದ್ದಾರೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ, ಕನ್ನಡ ಮಾಧ್ಯಮದ, ಅನುದಾನಿತ ಶಾಲಾ, ಕಾಲೇಜುಗಳಿಗೆ ಅನುದಾನದ ಕೊರತೆಯಾಗಿದೆ. ಶಿಕ್ಷಕರ ಸಮಸ್ಯೆ ಉಲ್ಬಣಿಸಿದೆ. ನವೆಂಬರ್ 2ನೇ ತಾರೀಖು, ಧಾರವಾಡದಲ್ಲಿ ಶಿಕ್ಷಕರ ಪಾದಯಾತ್ರೆ ನಡೆಯಲಿದೆ, ಎಂದರು.

<><><>

**ರಾಯಚೂರು ಮಹಾನಗರ ಪಾಲಿಕೆಯ** ಹಳೆ ಕಟ್ಟಡದಲ್ಲಿ, ಪಾಲಿಕೆ ದಾಖಲೆ ಡಿಜಿಟಲೀಕರಣ ಕೊಠಡಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾಕ್ಟರ ಅಜಯ್ ಧರ್ಮಸಿಂಗ್ ಚಾಲನೆ ನೀಡಿದರು. ಡಿಜಿಟಲೀಕರಣ ಕೊಠಡಿ ಸೌಲಭ್ಯಕ್ಕಾಗಿ 2 ಕೋಟಿ ರೂಪಾಯಿ ವೆಚ್ಚ ಮಾಡಲಾಗಿದೆ. ದಾಖಲೆಗಳ ಸುರಕ್ಷಿತ ಸಂರಕ್ಷಣೆ ಮತ್ತು ಸುಲಭ ನಿರ್ವಹಣೆಗೆ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

<><><>

**ಹಾಸನ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ,** ವಿಶ್ವಕರ್ಮ ಜಯಂತಿ ಅಂಗವಾಗಿ ಆಯೋಜಿತ, ಕಾರ್ಯಕ್ರಮಕ್ಕೆ ಸಂಸದ ಶ್ರೇಯಸ್ ಪಟೇಲ್ ಚಾಲನೆ ನೀಡಿದರು.

<><><>

**ಅಂತಾರಾಷ್ಟ್ರೀಯ ಕಡಲ ತೀರ ಸ್ವಚ್ಛತಾ ದಿನದ** ಅಂಗವಾಗಿ, ನಾಳೆ 19 ರಂದು, ಉತ್ತರ ಕನ್ನಡ ಜಿಲ್ಲೆ, ಕಾಸರಕೋಡ, ಟೊಂಕಾ ಕಡಲತೀರದಲ್ಲಿ, 'ಸ್ವಚ್ಛ ಸಾಗರ, ಸುರಕ್ಷಿತ ಸಾಗರ' ಅಭಿಯಾನ ಆಯೋಜಿತವಾಗಿದೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**